ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ತಿಪಟೂರು

ಸಿ.ಸಿ. ನಂ. **759/2024**

ಸಿ.ಡಬ್ಲ್ಯೂ:**2**
ಪಿ.ಡಬ್ಲ್ಯೂ:**7**

ದಿಃ **16.06.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಹೆಸರು: ಸಿದ್ದಿಕ್ ಪಾಷ
ತಂದೆ ಹೆಸರು : ಹಾಭೀದ್
ವಯಸ್ಸು : **24** ವರ್ಷ
ಉದ್ಯೋಗ : ಕೋಳಿ ಅಂಗಡಿ ವ್ಯಾಪಾರ
ವಾಸ ಸ್ಥಳ : ತಿಪಟೂರು

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಸುಮಾರು 1 ವರೆ ವರ್ಷಗಳ ಹಿಂದೆ ಒಂದು ದಿನ ನಾನು ಸ್ವಂತ ಕೆಲಸದ ನಿಮಿತ್ತ ತುಮಕೂರಿಗೆ ಹೋಗಿ ಮಧ್ಯರಾತ್ರಿ 1-30 ಗಂಟೆ ಸಮಯದಲ್ಲಿ ವಾಪಾಸ್ಸು ತಿಪಟೂರಿಗೆ ಬಂದು ಕೋಡಿ ಸರ್ಕಲ್ ಬಳಿ ಇಳಿದಿದ್ದು ಆ ಸಮಯದಲ್ಲಿ ಶಿವಮೊಗ್ಗ ಕಡೆಯಿಂದ ಬೆಂಗಳೂರು ಕಡೆಗೆ ಹೋಗುವ ಒಂದು ಕೆ.ಎಸ್.ಆರ್.ಟಿ.ಸಿ ಬಸ್ ಕೋಡಿ ಸರ್ಕಲ್ ಬಳಿಯ ಹಮ್ಸ್ ನಲ್ಲಿ ಇನ್ನೊಂದು ಬಸ್ ಗೆ ತಾಗಿ ಅಪಘಾತವಾಗಿರುತ್ತದೆ. ಅಪಘಾತದಿಂದ ಒಬ್ಬ ಮಹಿಳೆಗೆ ಪೆಟ್ಟಾಗಿತ್ತು ಮತ್ತು ಆಕೆಯನ್ನು ಆಸ್ಪತ್ರೆಗೆ ಅಲ್ಲಿದ್ದ ಜನರು ಕರೆದುಕೊಂಡು ಹೋಗಿರುತ್ತಾರೆ. ಸದರಿ ಅಪಘಾತ ಪಡಿಸಿದ ಬಸ್ ಸಂಖ್ಯೆ 1686 ಆಗಿರುತ್ತದೆ.

ಅಪಘಾತ ಪಡಿಸಿದ ವಾಹನದ ಚಾಲಕ ಅಥವಾ ನಿರ್ವಾಹಕನ ಹೆಸರು ತಿಳಿದುಕೊಂಡಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಯ ಒಂದು ಅಂಶಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು**,** ಸದರಿ ಅಂಶಕ್ಕೆ ಮಾತ್ರ ಅನುಮತಿ ನೀಡಲಾಯಿತು**)**

<u>ಪಾಟೀ ಸವಾಲು ಮಾನ್ಯ ಎಪಿಪಿ ರವರಿಂದಃ-</u>

ಅಪಘಾತ ಪಡಿಸಿದ ಕೆ.ಎಸ್.ಆರ್.ಟಿ.ಸಿ ಬಸ್ ಬೇರೆ ಯಾವುದೇ ವಾಹನಕ್ಕೆ ಢಿಕ್ಕಿ ಪಡಿಸಿಲ್ಲ ಬದಲಾಗಿ ಕೋಡಿ ಸರ್ಕಲ್ ನಲ್ಲಿ ಅರಳೀಕಟ್ಟೆಯ ಹಮ್ಸ್ ನಲ್ಲಿ  ಚಾಲಕ ಏಕಾಏಕಿ ಬಸ್ ನ ಬ್ರೇಕ್ ಹಾಕಿದ ಕಾರಣ ಬಸ್ಸ್ ನ ಒಳಗಿದ್ದ ಪ್ರಯಾಣಿಕರಾದ ಸುರೇಖಾ ರವರಿಗೆ ಪೆಟ್ಟಾಯಿತು ಎಂದರೆ ಸರಿ. ಈ ಅಪಘಾತವು ಕೆ.ಎಸ್.ಆರ್.ಟಿ.ಸಿ ಬಸ್ಸ್ ಚಾಲಕನ ತಪ್ಪಿನಿಂದ ಆಗಿದ್ದು ಆತನ ಹೆಸರು ರಾಜು ಮತ್ತು ನಿರ್ವಾಹಕನ ಹೆಸರು ಹರೀಶ್ ಎಂದು ಗೊತ್ತಾಯಿತು ಎಂದರೆ ಸರಿ.

ಪಾಟೀ ಸವಾಲು ಆರೋಪಿತರ ಪರ ಶ್ರೀ ಎ.ಎಂ.ವಿ ವಕೀಲರಿಂದಃ-

ನನ್ನ ಸ್ವಂತ ಊರು ಹಿಪ್ಪೇತೋಪು ಗಾಂಧಿನಗರ ತಿಪಟೂರು ನಗರ ಎಂದರೆ ಸರಿ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ. ಸದರಿ ದಿನದಂದು ನಾನು ತುಮಕೂರಿನಿಂದ ತಿಪಟೂರಿಗೆ ಕೋಳಿಯ ವಾಹನದಲ್ಲಿ

ಬರುತ್ತಿದ್ದೆ. ವಾಹನವನ್ನು ನಾನೇ ಚಲಾಯಿಸುತ್ತಿದ್ದೆ. ಕೋಡಿ ಸರ್ಕಲ್ ನ ಬಳಿ ನಾನು ಚಹ ಕುಡಿಯಲು ನಿಲ್ಲಿಸಿದ್ದೆ. ಅಪಘಾತ ಸ್ಥಳದಿಂದ ನಾನು ಸುಮಾರು 200 ಮೀಟರ್ ದೂರದಲ್ಲಿ ನಿಂತಿದ್ದೆ. ಅಲ್ಲಿ ಕತ್ತಲು ಇತ್ತು ಎಂದರೆ ಸರಿ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಅಪಘಾತ ಪಡಿಸಿತ್ತು ಎಂದು ಹೇಳುವ ಎದುರು ಬದಿಯ ವಾಹನದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ನಿದ್ದೆ ಮಾಡಿ ತೂಕಡಿಸಿ ಬಿದ್ದು ಪರಿಹಾರಕ್ಕಾಗಿ ಈ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಘಟನೆಯನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಬಸ್ ನ ಚಾಲಕನ ಮತ್ತು ನಿರ್ವಾಹಕನ ಹೆಸರು ನನಗೆ ಗೊತ್ತಾಗಿರುವುದಿಲ್ಲ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

(ವರದರಾಜ್ ಬಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.